## 3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ
## ಇವರ ನ್ಯಾಯಾಲಯದಲ್ಲಿ, ಬೆಳಗಾವಿ.

ಸ್ಪೆಷಲ್ ಕೇಸ ನಂಃ 75/2018

ಪಿಡಬ್ಲು :38 ಸಿಡಬ್ಲು :54

ಸಾಕ್ಷಿಯ ಹೆಸರು : ಶ್ರೀ.ಸತೀಶ ಚಿಟಗುಬ್ಬಿ

ತಂದೆಯ ಹೆಸರು : ಶ್ರೀ.ಶಂಕರ

ವಯಸ್ಸು : 58 ವರ್ಷ

ಉದ್ಯೋಗ : ಅಧೀಕ್ಷಕರು, ಲೋಕಾಯುಕ್ತ, ರಾಯಚೂರು

ವಾಸ್ತವ್ಯ : ರಾಯಚೂರು

ದಿನಾಂಕ : 14-01-2026 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

### ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ

ನಾನು ದಿನಾಂಕಃ 21-03-2016 ರಿಂದ ದಿನಾಂಕಃ 18-10-2017 ರವರೆಗೆ ನಾನು ಅಥಣಿ ಉಪವಿಭಾಗದಲ್ಲಿ ಆರಕ್ಷಕ ಉಪಾಧೀಕ್ಷಕರಾಗಿ ಕರ್ತವ್ಯ ನಿರ್ವಹಿಸಿದ್ದೇನೆ. ಹಾರೂಗೇರಿ ಪೋಲಿಸ ಠಾಣೆ ನನ್ನ ಕಾರ್ಯವ್ಯಾಪ್ತಿಗೆ ಬರುತ್ತಿತ್ತು.

2. ಹಾರೂಗೇರಿ ಪೋಲಿಸ ಠಾಣೆ ಅಪರಾಧ ಸಂಖ್ಯೆ 157/2017 ದಿನಾಂಕಃ 26-08-2017 ರಂದು ರಾತ್ರಿ 9:00 ಗಂಟೆಗೆ ದಾಖಲಾಗಿತ್ತು. ಈ ಪ್ರಕರಣದ ತನಿಖೆಯನ್ನು ಆರಕ್ಷಕ ಅಧೀಕ್ಷಕರ ಆದೇಶದ ಮೇರೆಗೆ ದಿನಾಂಕಃ27-08-2017 ರಂದು ವಹಿಸಿಕೊಂಡಿದ್ದೇನೆ. ತನಿಖಾ ಆದೇಶವನ್ನು ನಿಪಿ-69 ಎಂದು, ಅದರ ಮೇಲಿರುವ ಸಾಕ್ಷಿಯ ಸ್ವೀಕೃತಿ ಸಹಿಯನ್ನು ನಿಪಿ-69 [ಎ] ಎಂದು ಗುರುತಿಸಲಾಯಿತು.

3. ಅದರ ಅನ್ವಯ ಪ್ರಕರಣದ ತನಿಖೆಯನ್ನು ಚಾಸಾಃ 53 ಎಮ್.ಆರ್.ಎಮ್. ತಹಶೀಲ್ದಾರ ಪಿ.ಎಸ್.ಐ ರವರಿಂದ ದಿನಾಂಕಃ 27-08-2017ರಂದು ವಹಿಸಿಕೊಂಡು ಅಲ್ಲಿಯವರೆಗೆ ಆದ ತನಿಖೆಯನ್ನು ಪರಿಶೀಲಿಸಿ ಮುಂದಿನ ತನಿಖೆಯನ್ನು ಕೈಗೊಂಡಿದ್ದೇನೆ. ಘಟನಾ ಸ್ಥಳವು ಮುಗಳಖೋಡ ಗ್ರಾಮದ ಸರ್ಕಾರಿ ಆಸ್ಪತ್ರೆಯಿಂದ ದುರ್ಗಾದೇವಿ ಗುಡಿಗೆ ಹೋಗುವ ರಸ್ತೆಯ ಪಕ್ಕದಲ್ಲಿ ಮಾದರ ಓಣಿಯಲ್ಲಿರುವ ಯಲ್ಲಮ್ಮದೇವಿ ಪಾದುಕಟ್ಟೆಯ ಬಳಿ ಆಗಿರುತ್ತದೆ.

4. ನಾನು ಸದರಿ ಸ್ಥಳಕ್ಕೆ ಭೇಟಿ ನೀಡಿದ್ದು, ಘಟನೆ ಪ್ರತ್ಯಕ್ಷ ಸಾಕ್ಷಿದಾರರಾದ ಚಾಸಾಃ 8 ಲಕ್ಷ್ಮಣ ಕೆಳಗಡೆ ಅವರು ತೋರಿಸಿದ ಸ್ಥಳದಲ್ಲಿ ಸಾಕ್ಷಿದಾರರ ಚಾಸಾಃ 2 ಲಕ್ಷ್ಮಣ ಕರಿಭೀಮಗೋಳ ಮತ್ತು ಚಾಸಾಃ 3 ಮಾಹಂತೇಶ ಬಳಿಗಾರ ಇವರುಗಳ ಸಮಕ್ಷಮ ನಿಪಿ-14 ಬೆಳಗ್ಗೆ 8:00 ಗಂಟೆಯಿಂದ 10:00 ಗಂಟೆಯವರೆಗೆ ಪಂಚನಾಮೆಯನ್ನು ಮಾಡಿದ್ದೇನೆ. ಪಂಚನಾಮೆಯನ್ನು ನಿಪಿ-14[ಡಿ] ಎಂದು ಗುರುತಿಸಲಾಯಿತು. ಪಂಚನಾಮೆ ಕಾಲಕ್ಕೆ 5 ಅಡಿ 4 ಇಂಚು ಇರುವ ಕಬ್ಬಿಣದ ಸರಳು, 5 ಅಡಿ 9 ಇಂಚು ಇರುವ ಬಂಬೂ ಕಟ್ಟಿಗೆ, 14 ಹಿಡಿಗೈ ಅಳತೆಯ ಕಲ್ಲುಗಳನ್ನು ಜಪ್ತು ಮಾಡಿ ಅವುಗಳನ್ನು ಠಾಣಾ ಸ್ವತ್ತು ಪಟ್ಟಿ ಸಂಖ್ಯೆ 73/2017 ರಂತೆ ಜಪ್ತು ಮಾಡಿದ್ದೇನೆ. ಸ್ವತ್ತು ಪಟ್ಟಿಯನ್ನು ನಿಪಿ-70 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-70 [ಎ] ಎಂದು ಗುರುತಿಸಲಾಯಿತು.

5. ನ್ಯಾಯಾಲಯದಲ್ಲಿ ಹಾಜರುಮಾಡಿರುವ ಕಬ್ಬಿಣದ ಸರಳು, ಬಂಬೂ ಕಟ್ಟಿಗೆಯನ್ನು ಮತ್ತು 14 ಹಿಡಿಗೈ ಅಳತೆಯ ಕಲ್ಲುಗಳನ್ನು ಸಾಕ್ಷಿ ಗುರುತಿಸಿದ್ದಾರೆ. ಅವುಗಳನ್ನು ಈಗಾಗಲೇ ಮು.ಮಾ.1, ಮು.ಮಾ.2 ಮತ್ತು ಮು.ಮಾ.3 ಎಂದು ಗುರುತಿಸಲಾಗಿದೆ. ಪಂಚನಾಮೆ ಸಮಯದಲ್ಲಿ ಫೋಟೋಗಳನ್ನು ತೆಗೆಯಲಾಗಿದೆ. ಪಂಚನಾಮೆ ಸಮಯದಲ್ಲಿ ನಕ್ಷೆಯನ್ನು , ತಯಾರಿಸಿದ್ದೇನೆ. ಕಚ್ಚಾ ನಕ್ಷೆಯನ್ನು ನಿಪಿ-71 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-71 [ಎ] ಎಂದು ಗುರುತಿಸಲಾಯಿತು.

6. ಪ್ರಕರಣದಲ್ಲಿ ಸಾಕ್ಷಿದಾರರಾದ ಚಾಸಾಃ 8 ಲಕ್ಷ್ಮಣ ಕೆಳಗಡೆ, ಚಾಸಾಃ 42 ಅಮರ, ಚಾಸಾಃ 19 ಸುಂದ್ರವ್ವ, ಚಾಸಾಃ 20 ಕಸ್ತೂರಿ ಮಾದರ, ಚಾಸಾಃ 21 ಶಾಂತವ್ವ, ಚಾಸಾಃ 22

ಅಬ್ಬಯವ್ವ, ಚಾಸಾಃ 23 ಸುಮಿತ್ರಾ, ಚಾಸಾಃ 24 ಮಾಲವ್ವ, ಚಾಸಾಃ 25 ಸುಶೀಲವ್ವ, ಚಾಸಾಃ 26 ನೀಲವ್ವ, ಚಾಸಾಃ 27 ರುಕ್ಮವ್ವ, ಚಾಸಾಃ 28 ಯಲ್ಲವ್ವ, ಚಾಸಾಃ 29 ಹನಮಂತ, ಚಾಸಾಃ 30 ಯಮನಪ್ಪ ಇವರುಗಳ ಹೇಳಿಕೆಗಳನ್ನು ಪಡೆದುಕೊಂಡಿದ್ದೇನೆ.

7. ಚಾಸಾಃ 20 ಪ್ರಾಸಾಃ 2 ಕಸ್ತೂರಿ ರವರು ನಿಪಿ–2 ರಂತೆ, ಚಾಸಾಃ 22 ಪ್ರಾಸಾಃ 3 ಅಬ್ಬಯವ್ವ ರವರು ನಿಪಿ–4 ರಂತೆ, ಚಾಸಾಃ 23 ಪ್ರಾಸಾಃ 4 ಸುಮಿತ್ರಾ ರವರು ನಿಪಿ–6 ರಂತೆ, ಚಾಸಾಃ25 ಪ್ರಾಸಾಃ 5 ಸುಶೀಲವ್ವ ರವರು ನಿಪಿ–8 ರಂತೆ, ಚಾಸಾಃ 29 ಪ್ರಾಸಾಃ 28 ಹನಮಂತ ರವರು ನಿಪಿ– 19 ರಂತೆ, ಚಾಸಾಃ 33 ಪ್ರಾಸಾಃ 22 ಮಿಲನ ರವರು ನಿಪಿ– 17 ರಂತೆ, ಚಾಸಾಃ 34 ಪ್ರಾಸಾಃ 27 ಮಲ್ಲು ರವರು ನಿಪಿ– 18 ರಂತೆ, ಚಾಸಾಃ 8 ಪ್ರಾಸಾಃ 17 ಲಕ್ಷ್ಮಣ ಕೆಳಗಡೆ ರವರು ನಿಪಿ– 16 ರಂತೆ, ಚಾಸಾಃ 43 ಪ್ರಾಸಾಃ 30 ರಾಮಚಂದ್ರ ಕುರಾಡೆ ರವರು ನಿಪಿ–20 ರಂತೆ ಹೇಳಿಕೆಗಳನ್ನು ನೀಡಿದ್ದಾರೆ.

8. ಪ್ರಕರಣ ಆರೋಪಿತರನ್ನು ಪತ್ತೆ ಮಾಡುವಂತೆ ಚಾಸಾಃ 53 ಪ್ರಾಸಾಃ 36 ರವರಿಗೆ ಜ್ಞಾಪನವನ್ನು ನೀಡಿದ್ದೇನು. ಅದನ್ನು ನಿಪಿ–72 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ–72 [ಎ] ಎಂದು ಗುರುತಿಸಲಾಯಿತು. ಚಾಸಾಃ 53 ರವರು 8ಜನ ಆರೋಪಿತರಾದ 1. ಅಜಿತ ಲಕ್ಷ್ಮಣ ಬಾಬನ್ನವರ, 2.ಸುರೇಂದ್ರ ಲಕ್ಷ್ಮಣ ಬಾಬನ್ನವರ, 3. ಪದ್ಮಣ್ಣ ರಾಮಪ್ಪ ಬಾಬನ್ನವರ, 4. ಅಪ್ಪಾಸಾಬ ಬಾಬನ್ನವರ, 5.ಬುಜಪ್ಪ ಬಾಬನ್ನವರ, 6. ಭೀಮಪ್ಪ ನೇಮನ್ನ ವಡ್ರಾಳಿ, 7. ಭರತೇಶ ರಾಮಪ್ಪ ಬಾಬನ್ನವರ, 8. ಮಾಳಪ್ಪ ವಿಠ್ಠಲ ಅಳಗವಾಡಿ ಇವರುಗಳನ್ನು ಮುಗಳಖೋಡ ಗ್ರಾಮದ ಹದ್ದಿಯಲ್ಲಿ 15:30ಗಂಟೆಗೆ ವಶಕ್ಕೆ ಪಡೆದುಕೊಂಡು 16:00ಗಂಟೆಗೆ ನನ್ನ ಮುಂದೆ ಹಾಜರುಮಾಡಿ ವರದಿ ಸಲ್ಲಿಸಿದ್ದಾರೆ. ಅದನ್ನು ಈಗಾಗಲೇ ನಿಪಿ–65 ಎಂದು ಗುರುತಿಸಿದ್ದು, ಅದರ ಮೇಲಿರುವ ಸಾಕ್ಷಿಯ ಸ್ವೀಕೃತಿ ಸಹಿಯನ್ನು ನಿಪಿ–65 [ಬಿ] ಎಂದು ಗುರುತಿಸಲಾಯಿತು. ನಾನು ಆರೋಪಿತರನ್ನು ವಿಚಾರಿಸಲಾಗಿ ಅವರು ಕೃತ್ಯ ಎಸಗಿರುವುದಾಗಿ ಒಪ್ಪಿಕೊಂಡಿದ್ದರಿಂದ ಅವರುಗಳ ಮೇಲೆ ದಸ್ತಗಿರಿ ಕ್ರಮ ಜರುಗಿಸಿ ರಿಮ್ಯಾಂಡ ಅರ್ಜಿಯೊಂದಿಗೆ ನ್ಯಾಯಾಲಯದಲ್ಲಿ ಹಾಜರುಮಾಡಿದ್ದೇನೆ.

9. ದಿನಾಂಕಃ 27-08-2017 ರಂದು ಹಾರೂಗೇರಿಯ ಮಲ್ಲಿಕಾರ್ಜುನ ಮಲ್ಟಿ ಸ್ಪೆಶಾಲಿಟಿ ಆಸ್ಪತ್ರೆಗೆ ಭೇಟಿ ನೀಡಿದ್ದು, ಅಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆಯುತ್ತಿದ್ದ ಬಸಪ್ಪ ಮಾದರ, ಯಮನಪ್ಪ ಮಾದರ, ಸುಶೀಲವ್ವ, ಶಿವಾನಂದ ಬಾವಿಮನಿ, ಅನೀಲ ಈರಗಾರ, ವಿಠ್ಠಲ ಮಾದರ, ರಾಜೀವ ಸಂದ್ರಿಮನಿ, ಮಹಾದೇವ ಗಸ್ತಿ, ಭೀಮಪ್ಪ ಮಾದರ,ದನಪಾಲ ಮಾದರ, ವಿಮಲವ್ವ ಮಾದರ ಇವರುಗಳ ಹೇಳಿಕೆಗಳನ್ನು ಪಡೆದುಕೊಂಡಿದ್ದೇನೆ. ದೂರು ನೀಡಲು ತಡವಾದ ಬಗ್ಗೆ ಕಾರಣವನ್ನು, ಸಮುದಾಯದ ಮುಖಂಡರೊಂದಿಗೆ ಚರ್ಚೆ ಮಾಡಿ, ವಕೀಲರ ಜೊತೆಗೆ ಚರ್ಚಿಸಿ ನಂತರ ದೂರು ಕೊಟ್ಟಿರುವುದಾಗಿ ತಿಳಿಸಿದ್ದಾರೆ.

10. ಪ್ರಕರಣದ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ತಲುಪಿಸಿದ ಸಿಬ್ಬಂದಿಯವರ ವರದಿಯನ್ನು ಪಡೆದುಕೊಂಡಿದ್ದೇನೆ. ದಿನಾಂಕಃ 28-08-2017 ರಂದು ಹಾರೂಗೇರಿಯ ಮಲ್ಲಿಕಾರ್ಜುನ ಮಲ್ಟಸ್ಪೆಶಾಲಿಟಿ ಆಸ್ಪತ್ರೆಗೆ ಭೇಟಿ ನೀಡಿದ್ದು, ಗಲಾಟೆ ಸಮಯದಲ್ಲಿ ಬಸಪ್ಪ ಅವರಿಗೆ ಗಾಯ ಅವರು ಧರಿಸಿದ ಬಿಳಿ ಬಣ್ಣದ ತಂಬು ತೋಳಿನ ಶರ್ಟಗೆ ರಕ್ತ ಆಗಿದ್ದು, ಅದನ್ನು ಸಾಕ್ಷಿದಾರರಾದ ಚಾಸಾಃ 4 ಲವಪ್ಪ, ಚಾಸಾಃ 5 ರಾಮಪ್ಪ ಇವರುಗಳ ಸಮಕ್ಷಮ ಬೆಳಗ್ಗೆ 9:00 ಗಂಟೆಯಿಂದ 9:45 ಗಂಟೆವರೆಗೆ ನಿಪಿ-15 ರಂತೆ ಪಂಚನಾಮೆಯನ್ನು ಮಾಡಿ ಶರ್ಟನ್ನು ಜಪ್ತು ಮಾಡಿಕೊಂಡಿದ್ದೇನೆ. ನಿಪಿ-15 ರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-15 [ಬಿ] ಎಂದು ಗುರುತಿಸಲಾಯಿತು. ನ್ಯಾಯಾಲಯದಲ್ಲಿ ಹಾಜರುಮಾಡಿರುವ ಶರ್ಟನ್ನು ಸಾಕ್ಷಿ ಗುರುತಿಸಿದ್ದಾರೆ. ಅದನ್ನು ಈಗಾಗಲೇ ಮು.ಮಾ.4 ಎಂದು ಗುರುತಿಸಲಾಗಿದೆ. ಅದೇ ದಿನ ದೂರುದಾರರ ಮುಂದುವರೆದ ಹೇಳಿಕೆಯನ್ನು ಪಡೆದುಕೊಂಡಿದ್ದೇನೆ.

11. ದಿನಾಂಕಃ 28-08-2017 ರಂದು ದೂರುದಾರರ ಮನೆಗೆ ಭೇಟಿ ನೀಡಿದ್ದೇನೆ. ಆರೋಪಿತರು ದೂರುದಾರರ ಮನೆಗೆ ಕಲ್ಲು ತೂರಾಟ ಮಾಡಿದ್ದು , ಮನೆಯ ಹಂಚನ್ನು ಒಡೆದುಹಾಕಿದ್ದು, ಆ ಬಗ್ಗೆ ದೂರುದಾರರ ಹೆಂಡತಿ ಸುಶೀಲವ್ವ ಅವರು ಸ್ಥಳ ತೋರಿಸಿದ್ದಾರೆ. ಆ ಬಗ್ಗೆ ನಾನು ಸಾಕ್ಷಿದಾರರ ಚಾಸಾಃ 6 ಲಕ್ಷ್ಮಣ ಹಾದಿಮನಿ, ಚಾಸಾಃ 7 ಬೀರಪ್ಪ ಮಾದರ ಇವರುಗಳ ಸಮಕ್ಷಮ ನಿಪಿ-10 ರಂತೆ ಮಧ್ಯಾಹ್ನ 14:15 - 15:30 ರವರೆಗೆ ಪಂಚನಾಮೆಯನ್ನು ಮಾಡಿದ್ದೇನೆ. ಆ ಸಮಯದಲ್ಲಿ ನಿಪಿ-11 ಮತ್ತು ನಿಪಿ-12 ರಂತೆ

ಪೋಟೋ ತೆಗೆದು ಹಿಡಿಗೈ ಗಾತ್ರದ ಎರಡು ಕಲ್ಲುಗಳನ್ನು ಜಪ್ತು ಮಾಡಿದ್ದೇನೆ. ಪಂಚನಾಮೆ ಮೇಲೆ ಸಾಕ್ಷಿಯ ಸಹಿಯನ್ನು ನಿಪಿ-10 [ಸಿ] ಎಂದು ಗುರುತಿಸಲಾಯಿತು. ನ್ಯಾಯಾಲಯದಲ್ಲಿ ಹಾಜರುಮಾಡಿರುವ ಕಲ್ಲನ್ನು ಸಾಕ್ಷಿ ಗುರುತಿಸಿದ್ದಾರೆ. ಅದನ್ನು ಈಗಾಗಲೇ ಮು.ಮಾ.5 ಎಂದು ಗುರುತಿಸಲಾಗಿದೆ.

12. ಅದೇ ದಿನ ಚಾಸಾಃ 9 ವಿಮಲವ್ವ ಅವರ ಮುಂದುವರೆದ ಹೇಳಿಕೆಯನ್ನು ಪಡೆದುಕೊಂಡಿದ್ದೇನೆ. ಸಾಕ್ಷಿದಾರರಾದ ಚಾಸಾಃ 40 ಅಕ್ಬರ, ಚಾಸಾಃ 41 ಬೀರಪ್ಪ ಇವರುಗಳ ಹೇಳಿಕೆಗಳನ್ನು ಪಡೆದುಕೊಂಡಿದ್ದೇನೆ. ಅಲ್ಲಿಂದ ಪುರಸಭೆಗೆ ಭೇಟಿ ನೀಡಿ ಆಸ್ತಿ ಸಂಖ್ಯೆ 643/ಎ1 ಗೆ ಸಂಬಂಧಿಸಿದ ದಾಖಲೆಗಳನ್ನು ನೀಡುವಂತೆ ಮನವಿ ಮಾಡಿದ್ದೇನೆ.

13. ಅದೇ ದಿನ ಪುರಸಭೆ ನೌಕರರಾದಂತಹ ಚಾಸಾಃ 37 ಯಮನಪ್ಪ, ಚಾಸಾಃ39 ಸೈಯ್ಯದ ನದಾಫ ಅವರುಗಳ ಹೇಳಿಕೆಗಳನ್ನು ಪಡೆದುಕೊಂಡಿದ್ದೇನೆ.

14. ದಿನಾಂಕಃ 28-08-2017 ರಂದು ಚಾಸಾಃ 43 ರಾಮಚಂದ್ರ ಕುರಾಡೆ ಅವರ ಹೇಳಿಕೆಯನ್ನು ಪಡೆದುಕೊಂಡಿದ್ದೇನೆ.

15. ಪಂಚನಾಮೆ ಕಾಲದಲ್ಲಿ ಜಪ್ತು ಮಾಡಲಾದ ಶರ್ಟ ಮತ್ತು ಕಲ್ಲನ್ನು ಠಾಣಾ ಸ್ವತ್ತು ಪಟ್ಟಿ ಸಂಖ್ಯೆ 75/2017 ಪ್ರಕಾರ ಪಟ್ಟಿ ತಯಾರಿಸಿ ನ್ಯಾಯಾಲಯಕ್ಕೆ ಕಳುಹಿಸಿದ್ದೇನೆ. ಅದನ್ನು ನಿಪಿ-73 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-73 [ಎ] ಎಂದು ಗುರುತಿಸಲಾಯಿತು. ಉಳಿದ ಆರೋಪಿತರನ್ನು ಪತ್ತೆ ಮಾಡುವಂತೆ ಪಿ.ಎಸ್.ಐ ರವರಿಗೆ ಜ್ಞಾಪನ ನೀಡಿದ್ದೇನೆ.

16. ದಿನಾಂಕಃ 31-08-2017 ರಂದು ಪಿರ್ಯಾದಿಯವರ ಹೇಳಿಕೆಯನ್ನು ದಂಡ ಪ್ರಕ್ರಿಯೆ ಸಂಹಿತೆ ಕಲಂ 164 ರ ಅಡಿಯಲ್ಲಿ ಮಾಡಿಸಲು ವೈದ್ಯರಿಂದ ಅನುಮತಿ ಪಡೆದುಕೊಂಡು ಚಾಸಾಃ 1 ರವರನ್ನು ರಾಯಬಾಗ ನ್ಯಾಯಾಲಯದಲ್ಲಿ ಹಾಜರುಮಾಡಿ ಅವರ ಹೇಳಿಕೆಯನ್ನು ದಾಖಲಿಸಿಕೊಳ್ಳಲಾಯಿತು.

17. ದಿನಾಂಕಃ 01-09-2017 ರಂದು ಚಾಸಾಃ 1 ಬಸಪ್ಪ, ಚಾಸಾಃ 13 ವಿಠ್ಠಲ, ಚಾಸಾಃ 16 ಭೀಮಪ್ಪ, ಚಾಸಾಃ 10 ಜಯಪಾಲ, ಚಾಸಾಃ18 ಸುಶೀಲವ್ವ, ಚಾಸಾಃ 12 ಅನೀಲ, ಚಾಸಾಃ 17ಧನಪಾಲ, ಚಾಸಾಃ 14 ರಾಜೀವ, ಚಾಸಾಃ 15 ಮಹಾದೇವ ಗಸ್ತಿ ಇವರುಗಳ ಹೇಳಿಕೆಗಳನ್ನು ಪಡೆದುಕೊಂಡಿದ್ದೇನೆ.

18. ದಿನಾಂಕಃ 02-09-2017 ರಂದು ಪ್ರಕರಣದ ಆರೋಪಿತರಿಗೆ ಸೇರಿದ ದಿನಾಂಕಃ 25-08-2017 ಮತ್ತು ದಿನಾಂಕಃ 26-08-2017 ರ ಮೊಬೈಲ ಕರೆಗಳ ವರದಿ ನೀಡುವಂತೆ ಎಸ್.ಪಿ ಅವರಿಗೆ ಇ-ಮೇಲ್ ಮೂಲಕ ಮನವಿ ಮಾಡಿದ್ದೇನೆ.

19. ದಿನಾಂಕಃ 03-09-2017 ರಂದು ಚಾಸಾಃ 31 ದುರ್ಗಪ್ಪ, ಚಾಸಾಃ 32 ಪ್ರಕಾಶ ಕಡಕೋಳ ಇವರ ಹೇಳಿಕೆಗಳನ್ನು ಪಡೆದುಕೊಂಡಿದ್ದೇನೆ. ದಿನಾಂಕಃ 04-09-2017 ರಂದು ಈ ಪ್ರಕರಣದಲ್ಲಿ 12 ಜನ ಮಹಿಳಾ ಗಾಯಾಳುಗಳು ಹಾಗೂ ಸಾಕ್ಷಿದಾರರು ಇದ್ದು, ಅವರ ಹೇಳಿಕೆಗಳನ್ನು ದಂಡ ಪ್ರಕ್ರಿಯೆ ಸಂಹಿತೆ ಕಲಂ 164 ರ ಅಡಿಯಲ್ಲಿ ದಾಖಲಿಸಿಕೊಳ್ಳಲು ರಾಯಬಾಗ, ಜೆ.ಎಮ್.ಎಫ್.ಸಿ ನ್ಯಾಯಾಲಯಕ್ಕೆ ಮನವಿಯನ್ನು ಮಾಡಿದ್ದೇನೆ. ಮನವಿಯನ್ನು ನಿಪಿ-74 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-74 [ಎ] ಎಂದು ಗುರುತಿಸಲಾಯಿತು.

20. ಅದೇ ದಿನ ಸಾಕ್ಷಿದಾರರಾದ ಚಾಸಾಃ 11 ಶಿವಾನಂದ, ಚಾಸಾಃ 12 ಅನೀಲ ರವರಿಗೆ ಪ್ರಕರಣದ ಬಗ್ಗೆ ಮಾಹಿತಿ ನೀಡುವಂತೆ ನೋಟಿಸ ನೀಡಿದ್ದೇನು. ಅವರುಗಳು ಯಾವುದೇ ಮಾಹಿತಿ ನೀಡಿರುವುದಿಲ್ಲ.

21. ದಿನಾಂಕಃ 05-09-2017 ರಂದು 36 ಜನ ಆರೋಪಿತರು, ಪಿರ್ಯಾದಿದಾರರು ಮತ್ತು ಸಾಕ್ಷಿದಾರರು ಸೇರಿ 60 ಜನರ ಜಾತಿ ಪ್ರಮಾಣ ನೀಡುವಂತೆ ತಹಶೀಲ್ದಾರ ರಾಯಬಾಗ ಇವರಿಗೆ ಮನವಿ ಮಾಡಿದ್ದೇನೆ. ಮನವಿಯನ್ನು ನಿಪಿ-75 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-75 [ಎ] ಎಂದು ಗುರುತಿಸಲಾಯಿತು.

22. ದಿನಾಂಕಃ 05-09-2017 ರಂದು ಆಸ್ತಿ ಸಂಖ್ಯೆ 643/ಎ/1 ಗೆ ಸಂಬಂಧಿಸಿದ ದಾಖಲೆಗಳನ್ನು ಹಾಗೂ ಮಾಹಿತಿಯನ್ನು ನೀಡುವಂತೆ ಪುರಸಭೆಯ ಮುಖ್ಯಾಧಿಕಾರಿಗೆ ಮನವಿಯನ್ನು ಮಾಡಿದ್ದೇನು. ಮನವಿಯನ್ನು ಈಗಾಗಲೇ ನಿಪಿ-52 ಎಂದು ಗುರುತಿಸಲಾಗಿದೆ. ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-52 [ಎ] ಎಂದು ಗುರುತಿಸಲಾಯಿತು.

23. ದಿನಾಂಕಃ 05-09-2017 ರಂದು ಚಾಸಾಃ 35, ಚಾಸಾಃ 36, ಚಾಸಾಃ 38 ಇವರುಗಳ ಹೇಳಿಕೆಗಳನ್ನು ಪಡೆದುಕೊಂಡಿದ್ದೇನೆ. ಚಾಸಾಃ 33 ಮಿಲನ ದೇವನ್ನವರ, ಚಾಸಾಃ 34 ಮಲ್ಲು ಕುರಾಡೆರವರು ಘಟನೆ ನಡೆದ ಸ್ಥಳದಲ್ಲಿ ಅವರು ಕೆಲಸಕ್ಕೆ ಹೋಗಿದ್ದು, ಅವರುಗಳ ಹೇಳಿಕೆಗಳನ್ನು ಪಡೆದುಕೊಂಡಿದ್ದೇನೆ. ಅವರುಗಳು ಕ್ರಮವಾಗಿ ನಿಪಿ-17 ಮತ್ತು ನಿಪಿ-18 ರಂತೆ ಹೇಳಿಕೆಗಳನ್ನು ನೀಡಿದ್ದಾರೆ.

24. ಚಾಸಾಃ 8, ಚಾಸಾಃ 9, ಚಾಸಾಃ19, ಚಾಸಾಃ 20, ಚಾಸಾಃ 21, ಚಾಸಾಃ 22, ಚಾಸಾಃ 23, ಚಾಸಾಃ 24, ಚಾಸಾಃ 25, ಚಾಸಾಃ 26 ಇವರುಗಳ ಗಾಯದ ಪ್ರಮಾಣ ಪತ್ರವನ್ನು ಚಾಸಾಃ 48 ಫ್ರಾಸಾಃ 33 ಎಸ್.ಎಮ್.ಪಾಟೀಲ ಇವರಿಂದ ಪಡೆದುಕೊಂಡಿದ್ದೇನೆ. ದಿನಾಂಕಃ 07-09-2017 ರಂದು ಜೆ.ಎಮ್.ಎಫ್.ಸಿ ನ್ಯಾಯಾಲಯದಲ್ಲಿ ಸಾಕ್ಷಿದಾರರು ದಂಡ ಪ್ರಕ್ರಿಯೆ ಸಂಹಿತೆ ಕಲಂ 164 ರ ಅಡಿಯಲ್ಲಿ ನೀಡಿದ ಹೇಳಿಕೆಗಳ ಪ್ರತಿಗಳನ್ನು ಸ್ವೀಕರಿಸಿಕೊಂಡಿದ್ದೇನೆ.

25. ದಿನಾಂಕಃ 08-09-2017 ರಂದು ನಾರಗೊಂಡ ಆಸ್ಪತ್ರೆಯಿಂದ ಚಾಸಾಃ 18 ಸುಶೀಲವ್ವ, ಚಾಸಾಃ 11, ಚಾಸಾಃ 12, ಚಾಸಾಃ14, ಚಾಸಾಃ 15 ಮಹಾದೇವ ಗಸ್ತಿ, ಚಾಸಾಃ 17 ಇವರುಗಳ ಗಾಯದ ಪ್ರಮಾಣ ಪತ್ರವನ್ನು ಪಡೆದುಕೊಂಡಿದ್ದೇನೆ. ಉಳಿದ ಗಾಯಾಳುಗಳು ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆಯುತ್ತಿದ್ದರು.

26. ಈ ಪ್ರಕರಣದಲ್ಲಿ ಜಪ್ತಾದ ಮು.ಮಾ.3 ಶರ್ಟನ್ನು ರಸಾಯನಿಕ ಪರೀಕ್ಷೆಗಾಗಿ RFSL ಕಚೇರಿ ಬೆಳಗಾವಿಗೆ ಚಾಸಾಃ 46 ರವರ ಮುಖಾಂತರ ಕಳುಹಿಸಿಕೊಟ್ಟಿದ್ದೇನೆ.

27. ಈ ಪ್ರಕರಣದಲ್ಲಿ 19 ಜನ ಆರೋಪಿತರು 3ನೇ ಹೆಚ್ಚುವರಿ ಸತ್ರ ನ್ಯಾಯಾಲಯದಿಂದ Crl.Misc.No.2387/2017 ರಂತೆ ಪೂರ್ವ ನಿರೀಕ್ಷಣಾ ಜಾಮೀನನ್ನು ಪಡೆದುಕೊಂಡು ಠಾಣೆಗೆ ಹಾಜರಾಗಿದ್ದು ಅವರ ಮೇಲೆ ಸಾಮಾನ್ಯ ದಸ್ತಗಿರಿ ಕ್ರಮ ಜರುಗಿಸಿ ಮುಚ್ಚಳಿಕೆ ಪಡೆದು ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ.

28. ದಿನಾಂಕಃ 21-09-2017 ರಂದು 8 ಜನ ಆರೋಪಿತರು 3ನೇ ಹೆಚ್ಚುವರಿ ಸತ್ರ ನ್ಯಾಯಾಲಯದಿಂದ Crl.Misc.No.2387/2017 ರಂತೆ ಪೂರ್ವ ನಿರೀಕ್ಷಣಾ ಜಾಮೀನನ್ನು ಪಡೆದುಕೊಂಡು ಠಾಣೆಗೆ ಹಾಜರಾಗಿದ್ದು ಅವರ ಮೇಲೆ ಸಾಮಾನ್ಯ ದಸ್ತಗಿರಿ ಕ್ರಮ ಜರುಗಿಸಿ ಮುಚ್ಚಳಿಕೆ ಪಡೆದು ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ.

29. ಪುರಸಭೆಯ ಹಿಂದಿನ ಮುಖ್ಯಾಧಿಕಾರಿಯಾದ ಕಾಶಿಲಿಂಗ ಕಿಲಾರೆ ಇವರು ರಾವುಸಾಬ ಬಾಬನ್ನ ಮತ್ತು ಶ್ರೀಮಂತ ಬಾಬನ್ನ ಇವರಿಗೆ ಆಸ್ತಿ ಸಂಖ್ಯೆ 643/ಎ/1 ಮತ್ತು 643/ಎ/2 ಇವುಗಳಲ್ಲಿ ಕಟ್ಟಡ ಕಟ್ಟಲು ಪರವಾನಿಗೆಯನ್ನು ನೀಡಿದ್ದ ಬಗ್ಗೆ ಮಾಹಿತಿಯನ್ನು ಕೋರಿದ್ದೇನು. ಅವರು ನಜರಚುಕಿನಿಂದ ಪರವಾನಿಗೆ ಕೊಟ್ಟಿದ್ದೇನು ಎಂದು, ನಂತರ ಅದನ್ನು ರದ್ದು ಮಾಡಿ ನೋಟಿಸ ನೀಡಿದ್ದೇನು ಎಂದು ನನ್ನ ಮುಂದೆ ಹೇಳಿಕೆ ನೀಡಿದ್ದಾರೆ.

30. ದಿನಾಂಕಃ 22-09-2017 ರಂದು RFSL ಕಚೇರಿಯಿಂದ ಸ್ವೀಕೃತಿ ಪತ್ರ ಪಡೆದುಕೊಂಡಿದ್ದೇನೆ.

31. ದಿನಾಂಕಃ 02-10-2017 ರಂದು ಸಾಕ್ಷಿದಾರರಾದ ಚಾಸಾಃ 1 ಬಸಪ್ಪ, ಚಾಸಾಃ 13 ವಿಠ್ಠಲ, ಚಾಸಾಃ 28 ಯಮನವ್ವ, ಚಾಸಾಃ30 ಯಮನಪ್ಪ, ಚಾಸಾಃ 11 ಶಿವಾನಂದ, ಚಾಸಾಃ 12 ಅನೀಲ, ಚಾಸಾಃ 14 ರಾಜೀವ ಇವರುಗಳ ಮುಂದುವರೆದ ಹೇಳಿಕೆಗಳನ್ನು ಪಡೆದುಕೊಂಡಿದ್ದೇನೆ.

32. ದಿನಾಂಕಃ 09-10-2017 ರಂದು ಚಾಸಾಃ 1 ಬಸಪ್ಪ, ಚಾಸಾಃ 10 ಜಯಪಾಲ, ಚಾಸಾಃ 13 ವಿಠ್ಠಲ, ಚಾಸಾಃ 16 ಭೀಮಪ್ಪ ಇವರುಗಳಿಗೆ ಆದಂತಹ ಗಾಯಗಳು ಸಾದಾ ಸ್ವರೂಪದ ಗಾಯಗಳು ಎಂದು ನಾರಗೊಂಡ ಆಸ್ಪತ್ರೆಯ ವೈದ್ಯರು ಪ್ರಮಾಣ ಪತ್ರ ನೀಡಿದ್ದಾರೆ. ಅವುಗಳನ್ನು ನಾನು ಕಡತದಲ್ಲಿ ಅಳವಡಿಸಿದ್ದೇನೆ. ಅವುಗಳನ್ನು ನಿಪಿ-42, ನಿಪಿ-43, ನಿಪಿ-44, ನಿಪಿ-45 ಎಂದು ಗುರುತಿಸಲಾಗಿದೆ. ಅವುಗಳ ಮೇಲಿರುವ ಸಾಕ್ಷಿಯ ಸ್ವೀಕೃತಿ ಸಹಿಯನ್ನು ನಿಪಿ-42 [ಬಿ], ನಿಪಿ-43 [ಬಿ], ನಿಪಿ-43 [ಬಿ] ಮತ್ತು ನಿಪಿ-44 [ಬಿ]ಎಂದು ಗುರುತಿಸಲಾಯಿತು.

33. ದಿನಾಂಕಃ15-10-2017 ರಂದು ಮುಖ್ಯಾಧಿಕಾರಿಗಳು ಮುಗಳಖೋಡ ಪುರಸಭೆ ಇವರಿಗೆ ದಾಖಲೆಗಳನ್ನು ಸ್ವೀಕರಿಸಿಕೊಂಡಿದ್ದೇನೆ. ಅದನ್ನು ಈಗಾಗಲೇ ನಿಪಿ-53 ಎಂದು ಗುರುತಿಸಲಾಗಿದೆ. ಅದರ ಮೇಲಿರುವ ಸಾಕ್ಷಿಯ ಸ್ವೀಕೃತಿ ಸಹಿಯನ್ನು ನಿಪಿ-53 [ಬಿ] ಎಂದು ಗುರುತಿಸಲಾಯಿತು.

34. ದಿನಾಂಕಃ 17-10-2017 ರಂದು ಕೃತ್ಯ ನಡೆದ ಸ್ಥಳದ ನಕ್ಷೆಯನ್ನು ಚಾಸಾಃ 50 ರವರಿಂದ ಪಡೆದುಕೊಂಡಿದ್ದೇನೆ.

35. ಈ ಪ್ರಕರಣದಲ್ಲಿ ನಾನು ತನಿಖೆಯನ್ನು ಪೂರ್ಣಗೊಳಿಸಿದ್ದು, ಅದನ್ನು ಪರಿಶೀಲನೆಗಾಗಿ ಎಸ್.ಪಿ ರವರಿಗೆ ಸಲ್ಲಿಸಿದ್ದೇನು. ಪರಿಶೀಲನಾ ವರದಿ ಬಾಕಿ ಇರುವಾಗಲೇ ದಿನಾಂಕಃ 17-10-2017 ರಂದು ನನಗೆ ವರ್ಗಾವಣೆ ಆಗಿದ್ದರಿಂದ ಕಡತವನ್ನು ಚಾಸಾಃ 55 ರವರಿಗೆ ಹಸ್ತಾಂತರಿಸಿದ್ದೇನೆ.

**ಪಾಟೀ ಸವಾಲುಃ 1 ಮತ್ತು 2 ನೇ ಆರೋಪಿತರ ಪರ ಶ್ರೀ.ಬಿ.ಜೆ.ಜಿ ವಕೀಲರಿಂದ**

ಈ ಹಂತದಲ್ಲಿ ನ್ಯಾಯಾಲಯದ ಸಮಯ ಮುಗಿದಿದ್ದರಿಂದ ಪಾಟೀ ಸವಾಲಿಗಾಗಿ ಪ್ರಕರಣವನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.

ದಿನಾಂಕ : 19-01-2026 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ 1 ಮತ್ತು 2 ನೇ ಆರೋಪಿತರ ಪರ ಶ್ರೀ.ಬಿ.ಜೆ.ಜಿ ವಕೀಲರಿಂದ**

ಅಪರಾಧ ಸಂಖ್ಯೆ.158/2017 ರಲ್ಲಿ ತನಿಖೆಯನ್ನು ಮಾಡಿ 17 ಜನ ಆರೋಪಿತರ ಮೇಲೆ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿದ್ದೇನೆ ಎನ್ನುವುದು ಸರಿ. ಆ ಪ್ರಕರಣ 963/2019 ರಂತೆ ಇದೇ ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿದೆ ಎನ್ನುವುದು ಸರಿ. ಅಪರಾಧ ಸಂಖ್ಯೆ .158/2017 ರ ಪ್ರಕರಣದಲ್ಲಿನ ಸಾಕ್ಷಿದಾರರಾದ ಅರಿಹಂತ ಬಾಬನ್ನ ಎನ್ನುವವರಿಗೆ ಮತ್ತು ಮಿಲನ ದೇವನ್ನವರ ಎನ್ನುವರಿಗೆ ತೀವ್ರ ಸ್ವರೂಪದ ಗಾಯವಾಗಿತ್ತು ಎನ್ನುವುದು ಸರಿ. ಅಪರಾಧ ಸಂಖ್ಯೆ .157/2017 ಮತ್ತು 158/2017 ಎರಡು ಪ್ರಕರಣಗಳಲ್ಲಿ ಅಪರಾಧ ಸ್ಥಳ ಒಂದೇ ಎನ್ನುವುದು ಸರಿ. ಅಪರಾಧ ಸಂಖ್ಯೆ .158/2017 ರಲ್ಲಿ ಗಾಯಾಳುಗಳು ಧರಿಸಿದ್ದ ರಕ್ತ ಸಿಕ್ತ ಬಟ್ಟೆಯನ್ನು ಜಪ್ತು ಮಾಡಿದ್ದೇನೆ ಎನ್ನುವುದು ಸರಿ. ಗಾಯದ ಪ್ರಮಾಣ ಪತ್ರವನ್ನು ಪಡೆದುಕೊಂಡಿದ್ದೇನೆ ಎನ್ನುವುದು ಸರಿ. ಅಪರಾಧ ಸಂಖ್ಯೆ157/2017 ರಲ್ಲಿ ಮುಗಳಕೋಡ ಪುರಸಭೆಯ ಮುಖ್ಯಾಧಿಕಾರಿಯವರಿಂದ ಆಸ್ತಿಗೆ ಸಂಬಂಧಿಸಿದ ದಾಖಲೆಗಳನ್ನು ಸಂಗ್ರಹಿಸಿ ಅದೇ ದಾಖಲೆಗಳನ್ನು ಅಪರಾಧ ಸಂಖ್ಯೆ 158/2017 ರಲ್ಲಿ ಹಾಜರು ಮಾಡಿದ್ದೇನೆ ಎನ್ನುವುದು ಸರಿ .ಮುಗಳಕೋಡ ಪುರಸಭೆಯ ಮುಖ್ಯಾಧಿಕಾರಿಯವರು ಹಾಜರು ಮಾಡಿರುವ ದಾಖಲೆಗಳ ಪೈಕಿ ನಕ್ಷೆ ಆಸ್ತಿ ಸಂಖ್ಯೆ643 ಕ್ಕೆ ಸಂಬಂಧಿಸಿಲ್ಲ ಎನ್ನುವುದಕ್ಕೆ ಸಾಕ್ಷಿ ನಾನು ದಾಖಲೆಗಳ ಬಗ್ಗೆ ತನಿಖೆ ಮಾಡಿಲ್ಲ ಎಂದು ಹೇಳಿದ್ದಾರೆ. ಮುಗಳಕೋಡ , ಹಂದಿಗುಂದ, ಇಟ್ನಾಳ , ಕಪ್ಪಲಗುಂದಿ , ಹಾರೋಗೇರಿ , ಪಾಲಭಾವಿ, ಮಮದಾಪೂರ ಗ್ರಾಮದ ಮಾದರ ಸಮಾಜದವರು ಆಸ್ತಿ ಸಂಖ್ಯೆ643 ರಲ್ಲಿನ ನಿವೇಶನವನ್ನು ಭವನ ಕಟ್ಟಲು ತಮ್ಮ ಜನಾಂಗಕ್ಕೆ ನೀಡಬೇಕು ಎಂದು ಬೇರೆ ಬೇರೆ ಅಧಿಕಾರಿಗಳಿಗೆ ಮನವಿ ನೀಡಿದ್ದಾರೆ ಎನ್ನುವುದು ಸರಿ.

2.ಆಸ್ತಿ ಸಂಖ್ಯೆ.643/ಎ/1/1 ಮತ್ತು 643/ಎ/1/2 ಗಳಲ್ಲಿನ ನಿವೇಶನಗಳನ್ನು

17 ಜನ ಸದಸ್ಯರು ಹಾಜರು ಇದ್ದು ಸಭೆ ನಡೆಸಿ ರಾವುಸಾಬ ಬಾಬನ್ನವರ ಹೆಸರಿಗೆ ಖಾತೆ ಮಾಡಲಾಗಿದೆ ಎನ್ನುವುದಕ್ಕೆ ಸಾಕ್ಷಿಯು ಸಭೆ ನಡೆಸದೆ ಅಧ್ಯಕ್ಷರ ಟಿಪ್ಪಣಿ ಮೇರೆಗೆ ನಮೂನೆ 9 ರಲ್ಲಿ ಬಾಬುಸಾಬ, ಲಕ್ಷ್ಮಣ ಬಾಬನ್ನವರ, ಶ್ರೀಮಂತ ನೇಮನ್ನ ಬಾಬನ್ನವರ ಮತ್ತು ಇತರರ ಹೆಸರನ್ನು ನಮೂದು ಮಾಡಲಾಗಿದೆ ಆದರೆ ಯಾವುದೇ ದಾಖಲೆಗಳಲ್ಲಿ ಆಸ್ತಿಯ ಅಳತೆಯನ್ನು ನಮೂದು ಮಾಡಿರುವುದಿಲ್ಲ.

3. ಈ ಪ್ರಕರಣದ ಆರೋಪಿತರು ಆಸ್ತಿ ಸಂಖ್ಯೆ 643 ರಲ್ಲಿ ಕಟ್ಟಡ ಕಾಮಗಾರಿಯನ್ನು ಮಾಡುವಾಗ ದೂರುದಾರರು ಅಪರಾಧ ಸಂಖ್ಯೆ 158/2017 ರ ಆರೋಪಿತರು ಎಕಾಎಕಿ ನುಗ್ಗಿ ಕಲ್ಲು ತೂರಾ ಮಾಡಿದ್ದು, ಊರಿನ ಜನರು ಸ್ಥಳಕ್ಕೆ ಬರುವುದನ್ನು ನೋಡಿ ತಾವೇ ಬಿದ್ದು ಗಾಯ ಮಾಡಿಕೊಂಡಿದ್ದಾರೆ ಎನ್ನುವುದು ಸರಿಯಲ್ಲ. ಪ್ರಾಸಾ-19 ರವರು ನಿಡಿ-1 ರಂತೆ ಪ್ರಾಸಾ-21 ರವರು ನಿಡಿ-2 ರಂತೆ ನನ್ನ ಮುಂದೆ ಹೇಳಿಕೆ ನೀಡಿದ್ದಾರೆ.

**ಪಾಟೀ ಸವಾಲು 3 ರಿಂದ 34 ನೇ ಆರೋಪಿತರ ಪರ ಶ್ರೀ ಎ.ಬಿ.ಬಿ .ವಕೀಲರಿಂದ**

1 ಮತ್ತು 2 ನೇ ಆರೋಪಿತರ ಪರ ವಕೀಲರು ಮಾಡಿದ ಪಾಟೀ ಸವಾಲನ್ನು 3 ರಿಂದ 34 ನೇ ಆರೋಪಿತರ ಪರ ವಕೀಲರು ತಮ್ಮ ಪಾಟೀ ಸವಾಲು ಎಂದು ಅಳವಡಿಸಿಕೊಂಡಿರುತ್ತಾರೆ.

**ಮರು ವಿಚಾರಣೆ: ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.